## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: **2015-16ನೇ** ಸಾಲಿನಲ್ಲಿ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯ ಅನಿಲ ಯೋಜನೆಯಡಿ **2014-15ನೇ** ಸಾಲಿನಲ್ಲಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಬಾಕಿ ಇರುವ ರಾಜ್ಯ ಸಹಾಯಧನ ಬಿಡುಗಡೆ ಕುರಿತು

### ಪ್ರಸ್ತಾವನೆ :

**2015-16ನೇ** ಸಾಲಿನ ರಾಜ್ಯ ಆಯವ್ಯಯದ ಲೆಕ್ಕ ಶೀರ್ಷಿಕೆ **2810-01-198-1-01-300 (Lumpsum)** ರಡಿಯಲ್ಲಿ **ರೂ.120.00** ಲಕ್ಷಗಳನ್ನು ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಡಿ ನಿರ್ಮಿಸಲಾದ ಜೈವಾನಿಲ ಸ್ಥಾವರಗಳಿಗೆ ಹಿಂದಿನ ಸಾಲುಗಳ ಬಾಕಿ ರಾಜ್ಯ ಸಹಾಯಧನ ಪಾವತಿಗಾಗಿ ಅನಿಲ ಯೋಜನೆಯಡಿ ನಿಗದಿಪಡಿಸಿದೆ.

ಇದರನ್ವಯ **2014-15ನೇ** ಸಾಲಿನಲ್ಲಿ ನಿಗದಿಪಡಿಸಿದ ಗುರಿಗಳನ್ವಯ SCP/TSP/ ಸಾಮಾನ್ಯ ವರ್ಗದಡಿ ಜೈವಾನಿಲ ಸ್ಥಾವರಗಳನ್ನು ನಿರ್ಮಿಸಿ, ರಾಜ್ಯ ಸಹಾಯಧನ ಪಾವತಿಗಾಗಿ ಬಾಕಿ ಇರುವ **ಒಟ್ಟು 19 ಜಿಲ್ಲೆಗಳಿಗೆ 2015-16ನೇ** ಸಾಲಿನಲ್ಲಿ **ಅನಿಲ ಯೋಜನೆಯಡಿ** ನಿಗದಿಪಡಿಸಿದ **ರೂ.120.00 ಲಕ್ಷಗಳ ಪೈಕಿ 1/3 ರಷ್ಟು** ಅಂದರೆ **ರೂ.40.00 ಲಕ್ಷಗಳನ್ನು ಅನುಬಂಧದಲ್ಲಿ** ಹಂಚಿಕೆ ಮಾಡಿದಂತೆ ರಾಜ್ಯ ಸಹಾಯಧನವನ್ನಾಗಿ ಬಿಡುಗಡೆ ಮಾಡಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

### ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/53/ಜೈಅಯೋ/2015, ಬೆಂಗಳೂರು, ದಿನಾಂಕ 14.08.2015

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ **2015-16ನೇ** ಸಾಲಿನಲ್ಲಿ, **2014-15ನೇ** ಸಾಲಿಗೆ ಸಂಬಂಧಿಸಿದಂತೆ **SCP/TSP/ ಸಾಮಾನ್ಯ ವರ್ಗದಡಿ** ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಬಾಕಿ ಇರುವ ಮೊದಲನೇ ಕಂತಿನ ರಾಜ್ಯ ಸಹಾಯಧನ **ರೂ.40.00 ಲಕ್ಷಗಳನ್ನು** (ನಲವತ್ತು ಲಕ್ಷ ರೂಪಾಯಿಗಳು ಮಾತ್ರ) **ಅನಿಲ ಯೋಜನೆ ಲೆಕ್ಕ ಶೀರ್ಷಿಕೆ 2810-01-198-1-01-300 (Lumpsum)** ರಡಿ ಅನುಬಂಧದಲ್ಲಿ ಹಂಚಿಕೆ ಮಾಡಿದಂತೆ 19 ಜಿಲ್ಲೆಗಳಿಗೆ ಬಿಡುಗಡೆ ಮಾಡಿ ಆದೇಶಿಸಿದೆ.

ಹಾಲಿ ಬಿಡುಗಡೆ ಮಾಡುತ್ತಿರುವ ಅನುದಾನವನ್ನು ಮಹಾಲೇಖಪಾಲರ ಲೆಕ್ಕ ತಪಾಸಣೆಗೊಳಪಟ್ಟು ಬಿಡುಗಡೆ ಮಾಡಲಾಗುತ್ತಿದ್ದು, ಉದ್ದೇಶಿತ ಕಾರ್ಯಕ್ರಮಕ್ಕಾಗಿ ಮಾತ್ರ ವಿನಿಯೋಗಿಸತಕ್ಕದ್ದು. ಯಾವುದೇ ಕಾರಣಕ್ಕೂ ಅನುದಾನವನ್ನು ಮಾರ್ಗಪಲ್ಲಟ ಮಾಡತಕ್ಕದಲ್ಲ. **ಪ್ರಸ್ತುತ ಬಿಡುಗಡೆ ಮಾಡುತ್ತಿರುವ ಸದರಿ ಅನುದಾನವನ್ನು ಗಾಂಧಿ ಸಾಕ್ಷಿ ಕಾಯಕದಡಿ ಇಂಧೀಕರಿಸಿ ಬಿಡುಗಡೆ ಮಾಡತಕ್ಕದ್ದು.**

ಈ ಆದೇಶ ಆಂತರಿಕ ಆರ್ಥಿಕ ಸಲಹೆಗಾರರ **ಟಿಪ್ಪಣಿ ಸಂಖ್ಯೆ : ಗ್ರಾಅಪ/445 /ಪಿ.ಬಿ.ಎಸ್./2015** ದಿನಾಂಕ **03.08.2015** ರಲ್ಲಿ ಸಹಮತಿಯನ್ನು ಪಡೆದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್. ಕೃಷ್ಣಪ್ಪ)
ನಿರ್ದೇಶಕರು (ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಾಗಲಕೋಟೆ, ಬೆಂಗಳೂರು(ಗ್ರಾ), ಬೆಂಗಳೂರು(ನಗರ), ಬೆಳಗಾಂ, ಬೀದರ್, ವಿಜಯಪುರ, ಚಾಮರಾಜನಗರ, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ, ದಕ್ಷಿಣ ಕನ್ನಡ, ಹಾಸನ, ಹಾವೇರಿ, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ತುಮಕೂರು, ಉಡುಪಿ, ಉತ್ತರ ಕನ್ನಡ ಮತ್ತು ಯಾದಗಿರಿ
3. ಜಿಲ್ಲಾ ಖಜಾನಾಧಿಕಾರಿಗಳು, ಬಾಗಲಕೋಟೆ, ಬೆಂಗಳೂರು(ಗ್ರಾ), ಬೆಂಗಳೂರು(ನಗರ), ಬೆಳಗಾಂ, ಬೀದರ್, ವಿಜಯಪುರ, ಚಾಮರಾಜನಗರ, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ, ದಕ್ಷಿಣ ಕನ್ನಡ, ಹಾಸನ, ಹಾವೇರಿ, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ತುಮಕೂರು, ಉಡುಪಿ, ಉತ್ತರ ಕನ್ನಡ ಮತ್ತು ಯಾದಗಿರಿ
4. ಉಪ ನಿರ್ದೇಶಕರು, ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್ ನಂ. 49, ಸೆಕೆಂಡ್ ಬ್ಲಾಕ್, ಸೆಕೆಂಡ್ ಪ್ಲೋರ್, ಖನಿಜ ಭವನ, ಸೌತ್ ಎಂಟ್ರನ್ಸ್, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
5. ವಿಶೇಷ ಅಧಿಕಾರಿಗಳು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿಯನ್ನು :

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು / ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾ) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3. ರಕ್ಷಾ ಕಡತಕ್ಕೆ / ಹೆಚ್ಚುವರಿ ಪ್ರತಿಗಳು.

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 53 ಜೈಅಯೋ 2015, ಬೆಂಗಳೂರು, ದಿನಾಂಕ 11.08..2015ರ ಲಗತ್ತು

## ಅನುಬಂಧ

| ಕ್ರ.ಸಂ | ಜಿಲ್ಲೆ | SCP | TSP | ಸಾಮಾನ್ಯ | ಬಿಡುಗಡೆ ಮಾಡಿದ ಅನುದಾನ ( ರೂ.ಲಕ್ಷಗಳಲ್ಲಿ) |
|---|---|---|---|---|---|
| 1 | 2 | 3 | 4 | 5 | 6 |
| 1 | ಬಾಗಲಕೋಟೆ | 0.39 | 0.14 | 2.31 | 2.84 |
| 2 | ಬೆಂಗಳೂರು (ಗ್ರಾ) | 0.11 | 0.00 | 0.00 | 0.11 |
| 3 | ಬೆಂಗಳೂರು ನಗರ | 0.11 | 0.00 | 0.00 | 0.11 |
| 4 | ಬೆಳಗಾವಿ | 3.15 | 6.55 | 0.70 | 10.40 |
| 5 | ಬೀದರ್ | 0.25 | 0.14 | 0.00 | 0.39 |
| 6 | ವಿಜಯಾಪುರ | 0.11 | 0.00 | 0.00 | 0.11 |
| 7 | ಚಾಮರಾಜನಗರ | 0.21 | 0.00 | 0.00 | 0.21 |
| 8 | ಚಿಕ್ಕಮಗಳೂರು | 0.25 | 0.00 | 0.00 | 0.25 |
| 9 | ಚಿಕ್ಕಬಳ್ಳಾಪುರ | 0.42 | 0.07 | 0.00 | 0.49 |
| 10 | ದಕ್ಷಿಣ ಕನ್ನಡ | 0.00 | 0.32 | 0.00 | 0.32 |
| 11 | ಹಾಸನ | 0.32 | 0.11 | 0.00 | 0.42 |
| 12 | ಹಾವೇರಿ | 0.00 | 0.00 | 5.52 | 5.52 |
| 13 | ಕೋಲಾರ | 0.07 | 0.00 | 0.00 | 0.07 |
| 14 | ಮಂಡ್ಯ | 0.14 | 0.00 | 0.00 | 0.14 |
| 15 | ಮೈಸೂರು | 0.53 | 0.04 | 0.00 | 0.56 |
| 16 | ರಾಮನಗರ | 0.39 | 0.28 | 0.00 | 0.67 |
| 17 | ತುಮಕೂರು | 0.04 | 0.00 | 0.00 | 0.04 |
| 18 | ಉಡುಪಿ | 0.35 | 2.59 | 14.31 | 17.25 |
| 19 | ಉತ್ತರ ಕನ್ನಡ | 0.07 | 0.07 | 0 | 0.14 |
| | ಒಟ್ಟು | **6.86** | **10.29** | **22.84** | **40.00** |

ನಿರ್ದೇಶಕರು (ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.